r. Manager, Consolidated Coffee angalore	1000000.00	06/12/1995
he Mysore Plantations Ltd. oppa, Chickmagalur	100000.00	06/12/1995
he Alageshwara Estate Ltd. hickmagalur	100000.00	06/12/1995
ld., K.S. Industrial Investment ev. Corpn., Bangalore	1000000.00	18/12/1995
MD, Mysore Paper Mills Ltd. angalore	1000000.00	18/12/1995
MD, Kudhuremukh Iron Ore Ltd. oramangala, Bangalore	1000000.00	18/12/1995
MD, Kar. Forest Dev. Corpn. angalore	1000000.00	27/12/1995

ಹೊಸದುರ್ಗ ತಾಲ್ಲೂಕಿನಲ್ಲಿರುವ ಸೇಂದಿ ವನ ಖರಾಬ್ ಜಮೀನಿನ ವಿಸ್ತೀರ್ಣ

256 - ಶ್ರೀ ಟಿ.ಹೆಚ್. ಬಸವರಾಜು (ಹೊಸದುರ್ಗ) : ಮಾನ್ಯ ಅಬಕಾರಿ ಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹೊಸದುರ್ಗ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಶೇಂದಿ ಖರಾಬ್ ಜಮೀನಿನ ವಿಸ್ತೀರ್ಣ ಎಷ್ಟು ಮತ್ತು ಈ ಜಮೀನನ್ನು ಬಗರ್ ಹುಕುಂ ಸಾಗುವಳಿ ಮಾಡಿರುವ ಬಗ್ಗೆ ಮಾಹಿತಿ ಸರ್ಕಾರದವರಲ್ಲಿಯೇ? ಇದ್ದಲ್ಲಿ ಅದರ ವಿಸ್ತೀರ್ಣ ಎಷ್ಟು?*

ಆ) *ಶೇಂದಿ ಬಾಬ್ತು ರದ್ದು ಮಾಡಿರುವುದರಿಂದ ಸದರಿ ಖರಾಬ್ ಜಮೀನನ್ನು ಕಾನೂನು ಪ್ರಕಾರ ವಿತರಣೆ ಮಾಡಲು ಮತ್ತು ಈ ಸಂಬಂಧ ಕಂದಾಯ ಇಲಾಖೆಗೆ ಹಸ್ತಾಂತರಿಸಲು ಕ್ರಮ ತೆಗೆದುಕೊಂಡಿದೆಯೇ?*

ಇ) *ಇದರಿಂದ ಇಲಾಖೆಗೆ ಯಾವುದೇ ಆದಾಯ ಇದೆಯೇ?*

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಹೊಸದುರ್ಗ ತಾಲ್ಲೂಕಿನಲ್ಲಿ 4362 ಎಕರೆ ಶೇಂದಿ ವನಕ್ಕೆ ಸೇರಿದ ಖರಾಬು ಮೀನು ಇರುತ್ತದೆ. ಇದರ ಪೈಕಿ 1718.17 ಎಕರೆ ಜಮೀನಿನಲ್ಲಿ ಬಗರ್ ಹುಕುಂ ಗುವಳಿ ನಡೆಯುತ್ತಿದೆ.

ಆ) ಇಲ್ಲ

ಇ) ಇಲ್ಲ

ಕಬ್ಬರಿ ಮತ್ತು ತೆಂಗು ಬೆಳೆಗೆ ತೆರಿಗೆಯಲ್ಲಿ ತಾರತಮ್ಯ

257 - ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತೆಂಗು ಬೆಳೆಯುವ ನಾಡಿನ ರೈತರಿಗೆ ಕೊಬ್ಬರಿ ಮತ್ತು ತೆಂಗುಗಳಿಗೆ ತೆರಿಗೆಯಲ್ಲಿ ತಾರತಮ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಈ ವ್ಯತ್ಯಾಸಕ್ಕೆ ಕಾರಣವೇನು?*

ಅ) ಕೊಬ್ಬರಿಯನ್ನು ಸಾಕಷ್ಟು ಉತ್ತಮ ಸ್ಥಿತಿವಂತರು ತಡೆಹಿಡಿದು ಕಾಪಾಡಿ ಜಾಸ್ತಿ ಬೆಲೆಗೆ ಮಾರಿ ಉತ್ತಮ ಲಾಭಗಳಿಸುತ್ತಾರೆ. ಆದೇ ರೀತಿ ಮಧ್ಯಮ ವರ್ಗದ ರೈತರು ತಮ್ಮ ಆಗುಹೋಗುಗಳಿಗೆ ನಿಭಾಯಿಸುವ ಸಲುವಾಗಿ ತಮ್ಮಲ್ಲಿರುವ ತೆಂಗುಗಳನ್ನು ಮಾರುತ್ತಿರುವಾಗ ಇಂತಹ ರೈತರಿಗೆ ಶೇಕಡಾ 4 ತೆರಿಗೆಯನ್ನು ವಿಧಿಸಿರುವುದು ಹಾಗೂ ಕೊಬ್ಬರಿಗೆ ಕೇವಲ ಶೇಕಡ 2 ತೆರಿಗೆಯನ್ನು ವಿಧಿಸುತ್ತಿರುವುದು ಈ ವ್ಯತ್ಯಾಸವನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

(ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) :

ಅ) ಕೊಬ್ಬರಿಯನ್ನು ಎಣ್ಣೆ ಬೀಜವನ್ನಾಗಿ ಪರಿಗಣಿಸಿ ಎಣ್ಣೆಯನ್ನು ತೆಗೆಯಲು ಉಪಯೋಗಿಸುವುದರಿಂದ ಇತರೆ ಎಣ್ಣೆ ಬೀಜಗಳಿಗೆ ಅನ್ವಯಿಸುವ ಶೇಕಡಾ 2ರ ತೆರಿಗೆ ಕೊಬ್ಬರಿಗೆ ಇರುತ್ತದೆ.

ಆ) ಮೇಲೆ ಹೇಳಿರುವ ಕಾರಣದಿಂದಾಗಿ ತೆಂಗಿನ ಕಾಯಿ ಮತ್ತು ಕೊಬ್ಬರಿ ಇವುಗಳ ಮೇಲೆ ಕ್ರಮವಾಗಿ ಶೇಕಡಾ 4 ಮತ್ತು ಶೇಕಡಾ 2ರ ತೆರಿಗೆಯನ್ನು ಮುಂದುವರೆಸಲಾಗಿದೆ.

ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂ ಮಾಡುವ ಬಗ್ಗೆ

75 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂ ಮಾಡುವ ಯೋಜನೆ ಸರಕಾರದವರಲ್ಲಿಯೇ?

ಆ) ಹಾಗಿಲ್ಲದಿದ್ದಲ್ಲಿ ಅವರಿಗೆ ಗೌರವಧನ ಹೆಚ್ಚಿಸಿರುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಯವರು)

ಅ) ಇಲ್ಲ

ಆ) ಈ ವಿಷಯವನ್ನು ಸರ್ಕಾರವು ಈಗಾಗಲೇ ಪರಿಶೀಲಿಸಿ ಆದೇಶ ಸಂಖ್ಯೆ ಮಮಇ 283 ಐಸಿಡಿ 95 ದಿನಾಂಕ 21-10-95ರಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಹೆಯಾನ 100 : ರೂ.ಗಳು ಹೆಚ್ಚುವರಿ ಗೌರವಧನವನ್ನು ದಿನಾಂಕ 1-11-95ರಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರದ ವತಿಯಿಂದ ಮಂಜೂರು ಮಾಡಿದೆ.

ಮದ್ಯ ಮುಕ್ತ ಗ್ರಾಮ ಮಾಡುವ ನಿರ್ಣಯ

77 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ ಪಂಚಾಯಿತುಗಳು ಮದ್ಯ ಮುಕ್ತ ಗ್ರಾಮ ಮಾಡಬೇಕೆಂದು ನಿರ್ಣಯ ಮಾಡಿದ್ದರು ಅಬಕಾರಿ ಇಲಾಖೆ ಶರಾಬು ಅಂಗಡಿ, ಸಿಎಲ್-2, ಸಿಎಲ್-9, ಪರವಾನಿಗೆ ಕೊಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದು ಅಬಕಾರಿ ಇಲಾಖೆಯ ಜನವಿರೋಧಿ ನೀತಿಯಾಗುವುದಿಲ್ಲವೇ?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಹೌದು, ಮದ್ಯ ಮುಕ್ತ ಗ್ರಾಮ ಮಾಡಬೇಕೆಂಬ ಗ್ರಾಮ ಪಂಚಾಯಿತಿ ನಿರ್ಣಯಗಳು, ಕರ್ನಾಟಕ ಅಬಕಾರಿ ಅಧಿಸೂಚನೆ 1965ರ ಅಡಿಯಲ್ಲಿ ರಚಿತವಾದ